(ಇಂದು ದಿನಾಂಕ 25-02-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)
(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀ ಪಿ.ಜಿ.ಪಿ. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ಪ್ರತಿವಾದಿ ಪರ ವಕೀಲರಿಂದ–**

ನಮ್ಮ ಮಾವನಿಗೆ ಸಂಬಂಧಪಟ್ಟಂತಹ ಐಡೆಂಟಿಟಪಿ ಕಾರ್ಡನ್ನು ನಿ.ಡಿ.7 ಎಂದು, ನಗರಸಭೆಯವರು ಕೊಟ್ಟ ಪರವಾನಿಗೆ ಪತ್ರವನ್ನು ನಿ.ಡಿ.8 ಎಂದು, ಆಸ್ತಿ ತೆರಿಗೆ ವಿವರ ಪಟ್ಟಿಕೆಯನ್ನು ನಿ.ಡಿ.9 ಎಂದು, ಅಸೆಸಮೆಂಟ್ ಆರ್ಡರನ್ನು ನಿ.ಡಿ.10 ಎಂದು, ಫಾರ್ಮ ನಂ. 6 ನ್ನು ನಿ.ಡಿ.11 ಎಂದು, ದಿನಾಂಕ 22-07-1961 ರ ಸರ್ಟಿಫಿಕೇಟನ್ನು ನಿ.ಡಿ.12 ಎಂದು, ನನ್ನ ಮಾವನಿಗೆ ಸಂಬಂಧಪಟ್ಟ ನೋಟ್ ಬುಕ್‌ನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ. 13 ಎಂದು, 1 ನೇ ಪ್ರತಿವಾದಿಗೆ ಸಂಬಂಧಪಟ್ಟಂತಹ ಸಿಂಡಿಕೇಟ್ ಬ್ಯಾಂಕನ ಪಾಸಬುಕ್‌ನ್ನು ನಿ.ಡಿ. 14 ಎಂದು, ನನ್ನ ಮತ್ತು 2 ನೇ ಪ್ರತಿವಾದಿಯ ಮದುವೆಗೆ ಸಂಬಂಧಪಟ್ಟಂತಹ ವಿವಾಹ ಆಮಂತ್ರಣ ಪತ್ರಿಕೆಯನ್ನು ನಿ.ಡಿ. 15 ಎಂದು, 1 ನೇ ಪ್ರತಿವಾದಿಗೆ ಸಂಬಂಧಪಟ್ಟಂತಹ ಔಟ್ ಪೇಶಂಟ್ ಕಾರ್ಡನ್ನು ನಿ.ಡಿ. 16 ಎಂದು, ದಾವಾ ಆಸ್ತಿಯನ್ನು ದುರುಸ್ತಿ ಮಾಡಿದ್ದಕ್ಕೆ ಸಂಬಂಧಪಟ್ಟಂತೆ 10 ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಡಿ.17 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ